









## ಕೊನೆಮೊದಲಿಲ್ಲದ ಶೋಷಣೆ

ಕಳೆದ 25–30 ವರ್ಷಗಳಿಂದ ಸರ್ಕಾರದ ಹಸ್ತಕ್ಷೇಪದಿಂದ ನಾಶವಾಗಿರುವ ಅರಣ್ಯ ಸಂಪತ್ತು ಅಂದಾಜು 2,22,727 ಎಕರೆ. ರಸ್ತೆ, ಪಟ್ಟಣ ಮತ್ತು ವಿದ್ಯುತ್ ತಂತಿ ಎಳೆಯಲು 10,401 ಹೆಕ್ಟೇರ್, ಕೃಷಿ ಕ್ಷೇತ್ರಕ್ಕೆ 67,217 ಹೆಕ್ಟೇರ್, ನೀರಿನಲ್ಲಿ ಮುಳುಗಿದ ಫಲವತ್ತಾದ ಭೂಮಿ 35,840 ಹೆಕ್ಟೇರ್, ಗಣಿಗಾರಿಕೆಗೆ 42,676 ಹೆಕ್ಟೇರ್, ಪುನರ್ವಸತಿಗೆ 25,820 ಹೆಕ್ಟೇರ್, ಕಾಳಿ ಯೋಜನೆಗೆ 12, 500 ಹೆಕ್ಟೇರ್, ಚಕ್ರಾಯೋಜನೆಗೆ 2600 ಹೆಕ್ಟೇರ್, ವರಾಹಿಗೆ 18,634 ಹೆಕ್ಟೇರ್, ಗಂಗಾವಳಿ ಯೋಜನೆಗೆ 10,027 ಹೆಕ್ಟೇರ್ ಭೂಮಿಯನ್ನು ಬಳಸಿಕೊಳ್ಳಲಾಗಿದೆ. ಸಹ್ಯಾದ್ರಿಯನ್ನು ಅವಲಂಬಿಸಿರುವ ಉದ್ಯಮಗಳ ಸಂಖ್ಯೆ 5803. ಈ ಘಟ್ಟವನ್ನು ಮುತ್ತಿಗೆ ಹಾಕಿ ಮುದುಡಿಸುವಲ್ಲಿ ಒಂದು ಕೋಟಿ ಹತ್ತು ಲಕ್ಷ ಜನ ನಿರತರಾಗಿದ್ದಾರೆ.